ರಸ್ತೆಗಳಲ್ಲಿ ಕೇವಲ 22 ಕೋಟಿಯ ಕಾಮಗಾರಿಗಳನ್ನು ಮಾತ್ರ ವಹಿಸಲಾಗಿದೆ. ಅದರಲ್ಲಿ ಸದಸ್ಯರ ಕ್ಷೇತ್ರದಲ್ಲಿ 3 ರಸ್ತೆಗಳನ್ನು ವಹಿಸಿಕೊಟ್ಟಿದ್ದೇವೆ. ಅವುಗಳಲ್ಲಿ ಎರಡು ರಸ್ತೆಗಳದ್ದು ಈಗಾಗಲೇ ಒಂದು ಕಿಮೀ, ಹೊಸಕೆರೆ-ಹುಲಿಕೆರೆಯಲ್ಲಿ ಒಂದು ಕಿಮೀ, ಬೆಳ್ಳಾರ-ಅಮರಾಪುರದಲ್ಲಿ 3 ಕಿಮೀ ಕೆಲಸ ನಡೆದಿದೆ. ಬುಕ್ಕಾಪಟ್ಟಣ ರಸ್ತೆಯನ್ನು ನಿಗಮಕ್ಕೆ ಕೊಡುವದು ಬೇಡ ಎಂದು ಹೇಳಿದ್ದಾರೆ ಅದನ್ನು ಮತ್ತೆ ಟೆಂಡರ್ ಕರೆದು ಟೆಂಡರ್‌ದಾರರಿಗೆ ಕೊಡುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದರು, ಎಷ್ಟೋ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಬಂದಿರಬಹುದು, ಕಂಟ್ರಾಕ್ಟರ್ 15ರಿಂದ 20 ಪರ್ಸೆಂಟ್‌ವರೆಗೆ ಹೆಚ್ಚಿಗೆ ಹಣ ಹಾಕಿ ಟೆಂಡರ್ ಕರೆದ ಅನೇಕ ಉದಾಹರಣೆಗಳಿವೆ. ಆ ಕಾರಣದಿಂದ ತೀವ್ರಗತಿಯಿಂದ ಕೆಲಸವಾಗಬೇಕೆಂಬ ಉದ್ದೇಶದಿಂದ ನಿರ್ಮಾಣ ನಿಗಮಕ್ಕೂ ರಸ್ತೆಗಳನ್ನು ಕೊಡರಿ ಎಂದು ಅನೇಕ ಸಲಹೆಗಳು ಬಂದಿವೆ. ಆದರೆ ತಮ್ಮ ಕ್ಷೇತ್ರದಲ್ಲಿ ಬೇಡ ಎಂದು ತಾವು ಹೇಳಿದರೆ ಅದಕ್ಕೆ ನಾವು ಸಮ್ಮತಿಸಿ ಆ ರಸ್ತೆಯ ಕಾಮಗಾರಿಗೆ ಟೆಂಡರ್ ಕೊಡುತ್ತೇವೆ.

ಇ. ಸಾಮೂಹಿಕ ವರ್ಗಾವಣೆ ಕುರಿತು.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಗೊಂದಲ ನಿರ್ಮಾಣವಾಗಿದೆ. ಅಧಿಕಾರಿಗಳಲ್ಲಿ ಗೊಂದಲ ನಿರ್ಮಾಣವಾಗಿದೆ. ಶಾಸಕರಲ್ಲೂ ಕೂಡ ಗೊಂದಲ ನಿರ್ಮಾಣವಾಗಿದೆ. ಏತಕ್ಕೆಂದರೆ ಶಾಸಕರ ಭವನದಲ್ಲಿ ದೊಡ್ಡ ಜಾತ್ರೆ, ಸಿರ್ಸಿ ಮಾರಿಕಾಂಬ ಜಾತ್ರೆಗಿಂತ ದೊಡ್ಡ ಸಂತೆಯಾಗಿದೆ. ಯಾವನೇ ಶಾಸಕ ಇವತ್ತು ಊರಿನಲ್ಲಿದ್ದರೆ ಬೆಳಗಿನಿಂದ ಸಂಜೆವರೆಗೆ ವರ್ಗಾವಣೆಗೆ ಶಿಫಾರಸ್ ಪತ್ರ ಕೊಡಿ ಎಂದು ಬೆಳಗಾಂನಿಂದ ಇಲ್ಲಿಯವರೆಗಿನ ಜನ ಬರುತ್ತಾರೆ. ಯಾವ ಕಚೇರಿಗೆ ಹೋದರೂ ಅಧಿಕಾರಿಗಳಿರುವುದಿಲ್ಲ, ಎಲ್ಲಿಗೆ ಹೋದರು ಅಂದರೆ ಸಚಿವರ ಶಿಫಾರಸ್ ಪತ್ರ ತರಲು ಹೋಗಿದ್ದೇವೆ ಎನ್ನುತ್ತಾರೆ. ಮುಖ್ಯಮಂತ್ರಿಗಳು ಸಾಮೂಹಿಕ ವರ್ಗಾವಣೆ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ, ಅದರಲ್ಲಿ ನಿರ್ದಿಷ್ಟ ಧೋರಣೆಗಳನ್ನು ನಮೂದಿಸಿಲ್ಲ. ಬೇರೆ ಬೇರೆ ಸಚಿವರು ಅಧಿಕಾರಿಗಳು ವರ್ಗಾವಣೆ ಬಗ್ಗೆ ಬೇರೆಬೇರೆ ಮಾತುಗಳನ್ನಾಡುತ್ತಿದ್ದಾರೆ. ಇದರಿಂದಾಗಿ ಸಾರ್ವಜನಿಕರಲ್ಲಿ ಗೊಂದಲವಾಗಿದೆ. ಇಡೀ ರಾಜ್ಯದಲ್ಲಿ ಅಧಿಕಾರಿಗಳು ಇಲಾಖೆಯಲ್ಲಿರದೆ ಶಾಸಕರ ಹಿಂದೆಯೊ ಸಚಿವರ ಹಿಂದೆಯೋ ತಿರುಗಾಡಿ ಆಡಳಿತ ವ್ಯವಸ್ಥೆ ಹದಗೆಟ್ಟಿದೆ. ವರ್ಷಾಂತ್ಯದಲ್ಲಿ ಇಂತಹ ಕಾಮಗಾರಿಗಳೇನಾಗಬೇಕೆಂದು ನಾವು ಹೇಳುತ್ತೇವೆ ಅಧಿಕಾರಿಗಳು ವರ್ಗಾವಣೆಗಾಗಿ ತಿರುಗಾಡುವುದರಿಂದ ಆ ಕೆಲಸಗಳು ಆಗುತ್ತಿಲ್ಲ. ಇವತ್ತು ವರ್ಗಾವಣೆ ರಾಜಕೀಯಕರಣವಾಗುತ್ತಿದೆ. ಪ್ರತಿಯೊಬ್ಬನೂ ಯಾವುದೋ ದುಂಬಾಲಿಗೆ ಬಿದ್ದು ಅವನ ಹಿಂದೆ ಹೋಗುವ ಪರಿಸ್ಥಿತಿ ಬಂದಿದೆ. ನಾಳೆ ವರ್ಗವಾದ ಮೇಲೆ ಯಾವನೋ ಒಬ್ಬ ವರ್ಗ ಮಾಡಿಸಿದ ಎಂದು ಅವನ ಮುಲಾಜಿಗೆ ಒಳಪಟ್ಟು ಅಧಿಕಾರಿ ಕೂಡ ಕರ್ತವ್ಯ ನಿರ್ವಹಣೆ ಮಾಡಲಾರದ ದೊಡ್ಡ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ವರ್ಗಗಳನ್ನು ಇಂತಹ

ಗೈಡ್‌ಲೈನ್ಸ್ ಕೆಳಗೆ ಮಾಡಬೇಕೆಂದು ಹೇಳುವ ವ್ಯವಸ್ಥೆಯಾಗಬೇಕಾಗಿದೆ. ರಾಜಕೀಯ ಹಿನ್ನೆಲೆಯಲ್ಲಿ ವರ್ಗ ಮಾಡುವುದನ್ನು ನಿಲ್ಲಿಸದಿದ್ದರೆ ಮಾನಮರ್ಯಾದೆ ಹೋಗಿ ಕೆಲಸ ಮಾಡಲು ಅಧಿಕಾರಿಗೂ ಸಾಧ್ಯವಿಲ್ಲ ಶಾಸಕರಿಗೂ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ನಮ್ಮ ಚೇಲಾಗಳು ನಮ್ಮಲ್ಲಿ ಬರುತ್ತಾರೆ. ಆಗ ನಾವು ಸರ್ಕಾರವನ್ನು ಒತ್ತಾಯಿಸುತ್ತೇವೆ ಆದ್ದರಿಂದ ಒಂದು ನಿಗದಿತ ಗೈಡ್‌ಲೈನ್ಸ್ ಅವರು ಕೊಡಬೇಕು. ಅದರಿಂದ ಜನರಲ್ಲಿ ಗೊಂದಲವಿರದ ವ್ಯವಸ್ಥೆ ನಿರ್ಮಾಣವಾಗಬೇಕು.

+ ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿಗಳು): ಅಧ್ಯಕ್ಷರೇ ಯಾವ ಮಾನ್ಯ ಸದಸ್ಯರಿಗೂ ರೆಫರ್ ಮಾಡದೆ ಈ ಸದನಕ್ಕೆ ತಮ್ಮ ಮೂಲಕ ನನ್ನ ವಿನಯಪೂರ್ಣ ವಿನಂತಿಯೇನೆಂದರೆ ಅಧಿಕಾರಿಗಳ ವರ್ಗಾವಣೆಯಲ್ಲಿ ಅಧಿಕಾರಿಗಳು ತಮ್ಮ ಪ್ರಭಾವ ಉಪಯೋಗಿಸುವುದಕ್ಕೆ ಕ್ಷೇತ್ರದ ಶಾಸಕರ ಮೂಲಕ ಅವರು ಆಡಳಿತದ ಅಥವಾ ವಿರೋಧ ಪಕ್ಷದವರಿರಬಹುದು ಸಂಬಂಧಪಟ್ಟ ಮಂತ್ರಿಗಳ ಮೂಲಕ ವರ್ಗಾವಣೆ ಬಯಸುತ್ತಾರೆ ಇದೊಂದು ಕೆಟ್ಟ ರೋಗ. ಮೊದಲನೇ ಬಾರಿ ನೋಡಿದಾಗ ಒಂದೇ ವರ್ಷ 75 ಸಾವಿರ ವರ್ಗಾವಣೆ ಆಗಿದ್ದವು. ಕಳೆದ ವರ್ಷ ಅದು 15 ಸಾವಿರಕ್ಕೆ ಇಳಿದಿದೆ. ಈ ವರ್ಷ ನಾನು ಎಲ್ಲಾ ಶಾಸಕರಿಗೂ ಹೇಳಿದ್ದೇನೆ: ನೀವು ಅನಾವಶ್ಯಕವಾಗಿ ಬಿಜಾಪುರ ಜಿಲ್ಲೆಯಲ್ಲಿರುವವನು ನಮಗೆ ಬೇಕಾದವನು ಅವನನ್ನು ಕೊಳ್ಳೆಗಾಲಕ್ಕೆ ತನ್ನಿರಿ ಎನ್ನುವುದು, ಕೊಳ್ಳೆಗಾಲದಲ್ಲಿರುವವನನ್ನು ಹುಬ್ಬಳ್ಳಿಗೆ ಒಯ್ಯುವುದು - ಒಬ್ಬ ಅಧಿಕಾರಿ ಕೆಲಸ ಮಾಡದೇ ಇದ್ದರೆ ಅಥವಾ ಜನವಿರೋಧಿಕೃತ್ಯಗಳಲ್ಲಿ ತೊಡಗಿದ್ದರೆ ಅವನಿಗೆ ಶಿಕ್ಷೆ ಕೊಡಬೇಕು. ಹಾಗಲ್ಲ, ಒಬ್ಬ ಜಿಲ್ಲಾಧಿಕಾರಿ ಒಬ್ಬ ತಹಸೀಲ್ದಾರನಿಗೆ ಯಾಕೋ ನೀನು ಕೆಲಸ ಮಾಡಿಲ್ಲ ಎಂದು ಸಸ್ಪೆಂಡ್ ಮಾಡಿದರೆ ಆ ಕ್ಷೇತ್ರದ ಶಾಸಕರು ಅಲ್ಲಿನ ಸಚಿವರ ಮೂಲಕ ಅವನನ್ನು ರೀ ಇನ್‌ಸ್ಟೇಟ್ ಮಾಡಿಸುತ್ತಾರೆ.

1.10 ಪಿ.ಎಂ.

ಇದನ್ನು ನಿಲ್ಲಿಸುವುದು ಹೇಗೆ? ಮೊದಲು ನಾವು ತೀರ್ಮಾನವನ್ನು ಮಾಡೋಣ. ಪ್ರತಿಯೊಬ್ಬರೂ ಯಾವುದೇ ಪಾರ್ಟಿಯವರು ಅನಾವಶ್ಯಕವಾಗಿ ನಾವು ಈ ಅಧಿಕಾರಿಗಳ ವರ್ಗಾವಣೆಯಲ್ಲಿ ತಲೆ ಹಾಕಬಾರದು. Departmental Heads should be empowered to bring discipline. ಅದನ್ನು ನಾವು ಮಾಡುತ್ತಿಲ್ಲ. ಬೇಕಾದರೆ ಒಂದು ಕಂಪ್ಯೂಟರೈಸ್ಡ್ ರಿಪೋರ್ಟನ್ನು ಕೊಡುತ್ತೇನೆ. ಯಾವ ಯಾವ ಅಧಿಕಾರಗಳ ಬಗ್ಗೆ ಯಾವ ಯಾವ ಶಾಸಕರು ಎಷ್ಟೆಷ್ಟು ಬಾರಿ ಬದಲಾವಣೆಗೆ ಮತ್ತು ಹಾಕುವುದಕ್ಕೆ ಅವನು ಬೇಡ ಇವನು, ಇವನು ಬೇಡ ಅವನು. ಸಬ್ ಇನ್ಸ್‌ಪೆಕ್ಟರ್ ಬೇಡ. ಇದನ್ನು ಮಾನ್ಯ ಸದಸ್ಯರು ತಂದಿದ್ದು ಬಹಳ ಒಳ್ಳೆಯದು. I really thank him. ನಾವೆಲ್ಲರೂ ಬೇಕಾದರೆ ಈ ಸದನದಲ್ಲಿ ನಾನು ಇಲ್ಲಿ ರೂಲಿಂಗ್ ಪಾರ್ಟಿ, ಅಪೋಜಿಷನ್ ಪಾರ್ಟಿ ಎಂದಲ್ಲ. ಇದಕ್ಕೆ ನಾವು ಒಂದು ಕೋಡ್ ಆಫ್ ಕಾಂಡಕ್ಟ್

ತರದೇ ಹೋದರೆ ಬಹಳ ಕಷ್ಟ ಹನುಮಂತಯ್ಯನವರ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಯಾರಾದರೂ ಓದಿದ್ದರೆ ಆಗಿನ ಕಾಲದಲ್ಲಿ ಯಾವ ಶಾಸಕರೂ ಅಧಿಕಾರಿಗಳ ವರ್ಗಾವಣೆಗೆಂದು ಹೋಗುತ್ತಲೇ ಇರಲಿಲ್ಲ. ನಾನು ಹತ್ತು ವರ್ಷ ಶಾಸಕನಾಗಿದ್ದಾಗ ವಿರೋಧಪಕ್ಷದಲ್ಲಿ ಯಾವುದೇ ಒಬ್ಬ ಅಧಿಕಾರಿಯ ವರ್ಗಾವಣೆಗೆ ಹೋಗಲಿಲ್ಲ. ಯಾರು ಬಂದರೇನಂತೆ ನನ್ನ ಕ್ಷೇತ್ರದಲ್ಲಿ. ತಹಶೀಲ್ದಾರ್ ಯಾರು ಬಂದ? ಸರ್ಕಲ್ ಇನ್ಸ್‌ಪೆಕ್ಟರ್ ಯಾರು? ಈಗ ಆ ರೀತಿ ಅಲ್ಲ. ನನ್ನ ಕ್ಷೇತ್ರದಲ್ಲಿ ಇಂಥವನೇ ಸರ್ಕಲ್ ಇನ್ಸ್‌ಪೆಕ್ಟರ್ ಇರಬೇಕು. ಆಮೇಲೆ ಡಿಸ್ಟ್ರಿಕ್ಟ್‌ನಲ್ಲಿ ಇಂಥವನೇ ಎಸ್.ಪಿ. ಇರಬೇಕು. ಜಿಲ್ಲಾಧಿಕಾರಿ ಇಂಥವನೇ ಇರಬೇಕು ಎಂದು ಓಡಾಡಿ ಈ ರಾಜಕೀಯ ಹೊಲಸನ್ನು ನಾವು ಈಗ ಅಡ್ಮಿನಿಸ್ಟ್ರೇಷನ್‌ನಲ್ಲಿ ತಂದಿದ್ದೇವೆ. ಅದನ್ನು ಹೇಗೆ ಸರಿಪಡಿಸುವುದು? I would welcome any suggestion by anybody. We will go to any extent with your permission. ಬೇಕಾದರೆ ಅಧಿಕಾರಿಗಳನ್ನು ಸಸ್ಪೆಂಡ್ ಅಲ್ಲ, ಡಿಸ್‌ಮಿಸ್ ಮಾಡುವುದಕ್ಕೂ ನಾನು ತಯಾರು. ಯಾವನಾದರೂ ಅಧಿಕಾರಿ ತನಗೋಸ್ಕರ ಅದು ಹೇಗೆ ಇಂಥ ಕ್ಷೇತ್ರದಲ್ಲಿ ಅವನಿಗೆ ಒಂದು ಪೋಸ್ಟ್ ಕೊಡುವುದಾದರೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಾನಂತೆ. ಇದು ವ್ಯಾಪಾರ ಶುರುವಾಗಿದೆ. Almost vulgar. ಇಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಇರಬೇಕು, ಇಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟ್‌ನವನು ಇಂಥವನು, ಪಿಡಬ್ಲ್ಯುಡಿ ಇಂಜಿನಿಯರ್ ಅಲ್ಲಿಗೆ ಹೋಗಬೇಕು. ಇದೇನಿದು? What is the limit? What are we doing? ಅದಕ್ಕೆ ರೆಕಮೆಂಡೇಷನ್ ಯಾರದ್ದು? ಬೇಕಾದರೆ ಅದನ್ನು ಒಂದು ಪಟ್ಟಿ ಕೊಟ್ಟುಬಿಡುತ್ತೇನೆ. ಯಾರ್ಯಾರು ಯಾರ ಬಗ್ಗೆ ಎಲ್ಲಿಂದ ಎಲ್ಲಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ರೆಕಮೆಂಡೇಷನ್ ಮಾಡಿದರು. ಅಥವಾ ಯಾವುದಾದರೂ ಒಬ್ಬ ಅಧಿಕಾರಿಯನ್ನು ಹಾಕಿದಾಗ ಯಾರು ಅದಕ್ಕೆ ರೆಸಿಸ್ಟ್ ಮಾಡಿದರು. ಒಂದು ಕಂಪ್ಯೂಟರೈಸ್ಡ್ ಪಟ್ಟಿಯನ್ನು ಕೊಡುತ್ತೇನೆ. ಇದರ ಬಗ್ಗೆ ಮೊನ್ನೆ ನಾವು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದೆವು. This is becoming a cancer. ಅಡ್ಮಿನಿಸ್ಟ್ರೇಷನ್ ಯಾವುದೇ ಹಿಡಿತ ಯಾರ ಕೈಗೂ ಬರದೇ ಇರುವುದಕ್ಕೆ ಈ ಕಾರಣ. ಡೆಪ್ಯುಟಿ ಕಮೀಷನರ್ ತಹಶೀಲ್ದಾರ್ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಹಾಗೆ ಇಲ್ಲ. ಏಕೆಂದರೆ ಆ ಶಾಸಕನ ಪ್ರೊಟೆಕ್ಷನ್ ಇದೆ. ನೀನೇನು ಮಾಡಿಕೊಳ್ಳುತ್ತೀಯೋ ನೋಡುತ್ತೇನೆ. ನೀನು ಎಷ್ಟು ದಿವಸ ಇರುತ್ತೀ ನೋಡುತ್ತೇನೆ ಎಂದು. ಕೆಳಗಿನ ಅಧಿಕಾರಿಗಳು ಮೇಲಿನ ಅಧಿಕಾರಿಗಳಿಗೆ ಥ್ರೆಟನ್ ಮಾಡಿದರೆ How are we to control this? ನಮ್ಮ ಸರ್ಕಾರದ್ದು ಇನ್ನೂ ಸಾವಿರ ಪಾಲು ಉತ್ತಮ. ಬೇರೆಯದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಮೇ 15ರಿಂದ ಮೇ 30ರ ಒಳಗಾಗಿ ಯಾರ್ಯಾರು ಜನ್ಯೂಯಿನ್ ಶಾಸಕರು ಕೆಲವು ಪೊಲಿಟಿಕಲ್ ಆಕ್ಟಿವಿಟೀಸ್ ಇದ್ದಾವೆ, ಇಲ್ಲ ಎಂದು ಹೇಳುವುದಿಲ್ಲ. ಕೆಲವರು ಬರೀ ಪೊಲಿಟಿಕಲ್ ಆಕ್ಟಿವಿಟೀಸ್‌ನಲ್ಲಿಯೇ ಜೀವನ ನಡೆಸಿಕೊಂಡು ಬಂದಿರುವ ಅಧಿಕಾರಿಗಳು ಇದ್ದಾರೆ.

ಅವರು ಶುಕ್ರವಾರ ಸಾಯಂಕಾಲ ಆಫೀಸ್ ಬಿಟ್ಟವರು ಮಂಗಳವಾರ ಬೆಳಿಗ್ಗೆ ಬರುವವರೂ ಇದ್ದಾರೆ. ಕಷ್ಟಪಟ್ಟು ದುಡಿಯುವವರೂ ಇದ್ದಾರೆ. ನಾನು ಎಲ್ಲರೂ ಹಾಗೆ ಎಂದು ಹೇಳುವುದಿಲ್ಲ. ಈಗ ಏನಾಗಿದೆ, ಕಷ್ಟಪಟ್ಟು ದುಡಿದವನಿಗೆ ರಿವಾರ್ಡ್ ಇಲ್ಲ. ಈ ಮ್ಯಾನಿಪ್ಯುಲೇಟರ್ಸ್ ಏನು ಇದ್ದಾರೆ, ನೀವು ಹೇಳಿದಂತೆ ಲೆಜಿಸ್ಲೇಟರ್ಸ್ ಹೋಂ, ವಿಧಾನಸೌಧದ ಮಿನಿಸ್ಟರ್ಸ್ ಆಫೀಸ್ ಇಲ್ಲೇ ತಿರುಗುತ್ತಿರುತ್ತಾರಲ್ಲಾ, ಅವರನ್ನು ನೋಟೀಸ್ ಮಾಡಿ ನಾಲ್ಕು ಜನರನ್ನಾದರೂ ಮನೆಗೆ ಕಳುಹಿಸಿದರೆ ಇದು ಸರಿಹೋಗುತ್ತದೆ. ಆಗ ಯಾರು ರೆಕಮೆಂಡೇಷನ್‌ಗೆ ಬರಬಾರದು. ಏನಾದರೂ ಮಾಡಿ ನಿಜವಾಗಿಯೂ ಅವನು ನಿರಪರಾಧಿ. ಬೈ ಛಾನ್ಸ್ ಏನೋ ಅವನ ಮೇಲೆ ಸಿಟ್ಟಿಗೋಸ್ಕರ ಈ ರೀತಿ ಹೇಳಿಬಿಟ್ಟಿದ್ದಾರೆ. ಇವತ್ತು ಚೀಫ್ ಸೆಕ್ರೆಟರಿ, if I don't allow the Chief Secretary to function, to bring discipline in the administration, if I interfere in his matters what can he do? The whole administration collapses. ಅದಕ್ಕೆ ನಾನು ಎಕ್ಸ್, ವೈ, ಜಡ್ ಉದಾಹರಣೆಯನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಇವತ್ತು ನನ್ನ ಮಿನಿಸ್ಟರ್ಸ್, ನಮ್ಮ ಎಂ.ಎಲ್.ಎ. irrespective of party ಅದು ಜಿನೈನ್ ಇದ್ದಾಗ ಇಂಥ ಆಫೀಸರ್ ಇದ್ದರೆ ನಿಜವಾಗಿಯೂ ತೊಂದರೆ ಇದ್ದರೆ, ಕಳ್ಳರು ಇದ್ದಾರೆ, ಸುಳ್ಳರೂ ಇದ್ದಾರೆ. ಬಹಳ ಜನ ಒಳ್ಳೆಯವರೂ ಇದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಅದಿರಲಿ, ಅವರನ್ನು ಇವರನ್ನು ಮಿಕ್ಸ್ ಮಾಡುವುದಕ್ಕೆ ಹೋಗಿ ಜಾತಿ, ಸಂಬಂಧ ಅದಕ್ಕಿಂತ ಹೆಚ್ಚಾಗಿ ದುಡ್ಡು. ಇವನು ಆಫೀಸರ್ ಟ್ರಾನ್ಸ್‌ಫರ್ ಕೇಳುವುದಕ್ಕೆ ಏಕೆ ಹೋಗುತ್ತಾನೆ. ಅವನ ಸಂಬಂಧ ಇದ್ದುಕೊಂಡು ಏನಾದರೂ ಕಷ್ಟ ಇದ್ದು ನನ್ನ ಹೆಂಡತಿ ಖಾಯಿಲೆ ಇದ್ದಾಳೆ, ಆಕೆಯನ್ನು ಆಸ್ಪತ್ರೆಗೆ ಸೇರಿಸಬೇಕು ಎಂದು ಕೇಳಿದರೆ ಮಾನವೀಯ ದೃಷ್ಟಿಯಿಂದ ಒಪ್ಪಿಕೊಳ್ಳೋಣ. ಅಥವಾ ಇನ್ನೇನೋ ಕೌಟುಂಬಿಕ ತೊಂದರೆ ಇದ್ದಾಗ ಒಪ್ಪಿಕೊಳ್ಳೋಣ. ಆರೋಗ್ಯ ದೃಷ್ಟಿಯಿಂದ ಒಪ್ಪಿಕೊಳ್ಳೋಣ. ಅಥವಾ ಏರಿಯಾ ದೃಷ್ಟಿಯಿಂದ ಒಪ್ಪಿಕೊಳ್ಳೋಣ. ಕೆಲವು ಅಧಿಕಾರಿಗಳು ದುಡ್ಡು ಕೊಟ್ಟೇ ಮಾಡಿಸಿಕೊಳ್ಳುತ್ತೇವೆ. ಯಾರು ಏನು ಮಾಡಿದರೇನು ಬಿಟ್ಟರೇನು? ದುಡ್ಡು ಸಿಗುವಂಥ ಕಡೆ ದುಡ್ಡು ಕೊಟ್ಟು ಮಾಡಿಸಿಕೊಳ್ಳುತ್ತಾರೆ. ಅಷ್ಟೇ ಹೇಳಿದ್ದು ನಾನು, ಹೆಚ್ಚಿಗೆಯೊ ಕಡಿಮೆಯೊ ದುಡ್ಡು ಎಲ್ಲಿ ಸಿಗುತ್ತದೋ ಅಲ್ಲಿ ದುಡ್ಡು ಕೊಟ್ಟು ಮಾಡಿಸಿಕೊಳ್ಳುತ್ತಾರೆ. ಆ ದುಡ್ಡು ತೆಗೆದುಕೊಂಡಿದ್ದಾನಲ್ಲಾ ಅವನು ಅಪರಾಧಿ. ತಾವು ಈ ಬಗ್ಗೆ ಯಾವುದೇ ಆಡಳಿತಾತ್ಮಕ ಸುಧಾರಣೆ....

ಶ್ರೀ ಹೆಚ್.ಎನ್.ನಂಜೇಗೌಡ: ದುಡ್ಡು ತೆಗೆದುಕೊಳ್ಳುವವನು ಅಪರಾಧಿ ಎಂದು ಆಯಿತಲ್ಲಾ, ಈಗ ಜೆ.ಎಂ.ಎಂ. ಕೇಸಿನಲ್ಲಿ ಎಂ.ಪೀಸ್ ದುಡ್ಡು ತೆಗೆದುಕೊಂಡವರನ್ನು ಸುಪ್ರೀಂ ಕೋರ್ಟು ಇಮ್ಯುನಿಟಿ ಕೊಟ್ಟಿದೆ.

ಶ್ರೀ ಜೆ.ಹೆಚ್.ಪಟೇಲ್: ಅದು ಯಾವ ತರಹ ಕೇಸೋ ಏನೋ. ಅದನ್ನು ಇಲ್ಲಿ

ಸದನದಲ್ಲಿ ಚರ್ಚೆ ಮಾಡುವುದು ಬೇಡ. ಬೇರೆ ಕಡೆಗೆ ಚರ್ಚೆ ಮಾಡೋಣ. ಅಲ್ಲಿ ಕೊಟ್ಟವನು ತಪ್ಪಂತೆ, ತೆಗೆದುಕೊಂಡವನು ಸರಿಯಂತೆ. ಕಾನೂನಿನ ಪ್ರಕಾರ ಕೊಟ್ಟವನು, ತೆಗೆದುಕೊಂಡವನು ಕೊಡಿಸಿದವನು ತೆಗೆದುಕೊಳ್ಳುವುದಕ್ಕೆ ಪ್ರೇರಣೆ ಮಾಡಿದವರು ಎಲ್ಲರೂ ತಪ್ಪೇ. Atleast let us try to bring some kind of sense. It has really become a non-sense. ಮೇ 15ರಿಂದ ಮೇ 31ರೊಳಗಾಗಿ ನಮ್ಮ ಎಂ.ಎಲ್.ಎ.ಗೂ ಹೇಳಿದ್ದೇನೆ. ತಮಗೂ ಅದೇ ಹೇಳುತ್ತೇನೆ. ನಿಜವಾದ ಕಾರಣ ಇದ್ದರೆ ಯಾವುದಾದರೂ ಅಧಿಕಾರಿಯ ವರ್ಗಾವಣೆ ಅವಶ್ಯಕ ಅಡ್ಮಿನಿಸ್ಟ್ರೇಟೀವ್ ಎಫಿಷಿಯೆನ್ಸಿ ದೃಷ್ಟಿಯಿಂದ ಅಥವಾ ಏನಾದರೂ ಲೋಕಲ್ ಪಾಲಿಟಿಕ್ಸ್ ಮಾಡುತ್ತಿದ್ದು ಅಥವಾ ಕಮ್ಯೂನಲ್ ಆ ವಿಷಯಗಳನ್ನು ಹಬ್ಬಿಸುತ್ತಿದ್ದರೆ ಅಂಥದ್ದಕ್ಕೆ ಬೇಕಾದರೆ ಮಾಡೋಣ. ಮೇ 31ರ ನಂತರ ಆರ್ಡರನ್ನು ಇಷ್ಯೂ ಮಾಡಿದ ಮೇಲೆ ಯಾರೇ ಬಂದರೂ ನಾವು ಛೇಂಜ್ ಮಾಡುವುದಿಲ್ಲ ಎನ್ನುವುದನ್ನು ಮಾಡಿಬಿಡೋಣ.

ಶ್ರೀ ಟಿ.ಬಿ.ಜಯಚಂದ್ರ: ತಮ್ಮ ಸಲಹೆಯನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ತಾವು 78ರಲ್ಲಿ ತಾವು ವಿಧಾನಸಭೆಯಲ್ಲಿ ಇದ್ದಿರಿ. ತಾವೂ ಕೂಡ ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಂಥ ಸಂದರ್ಭದಲ್ಲಿ ಅಂದು ಮುಖ್ಯಮಂತ್ರಿಗಳಾಗಿದ್ದಂಥ ಗುಂಡುರಾಯರ ಕಾಲದಲ್ಲಿ ನಮಗೆ ಶಿಫಾರಸ್ಸಿಗೋಸ್ಕರ ಯಾರೂ ಕೂಡ ಅಧಿಕಾರಿಗಳು ಬರುತ್ತಿರಲಿಲ್ಲ. ತದನಂತರ ಈ ದಂದೆ ಜಾಸ್ತಿಯಾಗಿ ನಾವು ಹೇಳುತ್ತೇವೆ ಮನಸ್ಸುಬಿಚ್ಚಿ, ಏಕಾದರೂ ಏಪ್ರಿಲ್, ಮೇ ಬರುತ್ತದೆ ಎಂದು ನಮಗನ್ನಿಸುತ್ತದೆ. ಆದಕ್ಕೆ ಕೆ.ಸಿ.ಎಸ್.ಆರ್.ನಲ್ಲಿ ಒಂದು ಪ್ರಾವಿಷನ್ ಇದೆ. ಯಾರ್ಯಾರು ಶಿಫಾರಸ್ಸು ತರುತ್ತಾರೋ ಅವರಿಗೆ ಷೋಕಾಸ್ ನೋಟೀಸ್ ಕೊಟ್ಟು ಕೆಲವರನ್ನು ಸಸ್ಪೆಂಡ್ ಮಾಡುವ ಮಟ್ಟಕ್ಕೆ ತಾವು ಹೇಳಿಕೆ ಕೊಡಬೇಕು.

ಶ್ರೀ ಜೆ.ಹೆಚ್.ಪಟೇಲ್: ಡಿಸಿಪ್ಲೀನ್ ತರುವುದಕ್ಕೆ 15 ದಿವಸ ಸಾಕು. ಒಂದು ಛಾಟಿ ಏಟು ಮೇಲೆ ಬಿದ್ದರೆ ಅದು ಕೆಳತನಕ ಹೋಗಿಬಿಡುತ್ತದೆ. ಮೇಲೆ ಇಂಟರ್‌ಫಿಯರೆನ್ಸ್ ಆಗಬಾರದು. ನಾನೇನೋ ಹೇಳಿದೆ ಎಂದು ಜಯಚಂದ್ರರವರು ಬಂದು ದಯವಿಟ್ಟು ಇದೊಂದು ಏನಾದರೂ ಮಾಡಿ ಎಂದು ಹೇಳಬಾರದು. ನಾನು ಸುಮ್ಮನೆ ಉದಾಹರಣೆಯಾಗಿ ಹೇಳಿದೆ. ಹಾಗಾದರೆ ಮೇ 15ರಿಂದ ಮೇ 31ರೊಳಗೆ ಎಲ್ಲಾ ಜನರು ಪೊಲಿಟಿಕಲ್ ಆಗಿ ಎಲ್ಲಾ ರೀತಿಯಿಂದ ಅನುಕೂಲತೆ ಆರೋಗ್ಯ ಎಲ್ಲಾ ದೃಷ್ಟಿಯಿಂದ ಒಂದು ಪಟ್ಟಿ ಮಾಡಿ ನಾನು ಆಗಲೇ ಹೇಳಿದಂತೆ I have already asked them to computerise ಅದರಲ್ಲಿ ರೀಸನಬಲ್ ಆಗಿರುವವರನ್ನು ಮಾಡಿ, ರೀಸನಬಲ್ ಆಗದಿದ್ದರೆ ಆಗುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಟ್ಟು 31ರ ನಂತರ no order should be revised. ಎಂದು ಮಾಡಿ ಎಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಚರ್ಚೆ ಅಲ್ಲ, ಬಹಳ ಸುದೀರ್ಘವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದಕ್ಕೆ ಏನಾದರೂ ಸೂತ್ರವನ್ನು ಕಂಡು ಹಿಡಿಯಬೇಕು. ಮಾನ್ಯ ಮುಖ್ಯಮಂತ್ರಿಗಳು ಹೋದ ಸಾರಿ ಸಹ ಹೇಳಿದ್ದೀರಿ. ಇದಕ್ಕೆ ಒಂದು ಸೂತ್ರವನ್ನು ಅಳವಡಿಸುತ್ತಿದ್ದೇವೆ, ಈ ಸೂತ್ರದ ಆಧಾರದ ಮೇಲೆ ನಾವು ವರ್ಗಾವರ್ಗಿಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈ ವರ್ಗಾವರ್ಗಿ ಎನ್ನುವುದು ನಿರಂತರವಾಗಿ ಸುಮಾರು 10- 13 ವರ್ಷದಿಂದ ನಡೆದಕೊಂಡು ಬಂದಿದೆ. ಅದರಿಂದ ಏನಾಗಿದೆ ಎಂದರೆ ವರ್ಗಾವರ್ಗಿ ಎಂದರೆ ಶಾಸಕರನ್ನು ಹಿಡಿದುಕೊಂಡು ಹೋಗಬೇಕು ಎನ್ನುವುದು ಬಂದು ಬಿಟ್ಟಿದೆ. ಇದೊಂದು ಸ್ಪಷ್ಟ. ಇಲ್ಲಿ ನಾವು ಸತ್ಯವನ್ನು ಹೇಳೋಣ. ಈಗ ಎಲ್ಲಾ ಶಾಸಕರ ಹತ್ತಿರ ಒಂದಲ್ಲ ಒಂದು ರೀತಿಯಿಂದ ವರ್ಗಾವರ್ಗಿ ಹಾಕಿಸಿ ಕೊಡಿ ಎಂದು ಹೋಗುತ್ತಾರೆ. ತಾಲ್ಲೂಕಿನಲ್ಲೂ ವರ್ಗಾವರ್ಗಿಗೆ ಹೋಗುತ್ತಾರೆ. ಅನೇಕ ಸಾರಿ ಏನಾಗುತ್ತದೆ? ವರ್ಗಾವರ್ಗಿ ಮಾಡುವುದಕ್ಕೆ ಆಗಲಿಲ್ಲ ಎಂದು ಇಟ್ಟುಕೊಳ್ಳೋಣ. ಅಲ್ಲಿ ಹಳ್ಳಿ ಕಡೆ, ತಾಲ್ಲೂಕಿನಲ್ಲಿ ಏನು ಹೇಳುತ್ತಾರೆಂದರೆ ಈ ಶಾಸಕರಿಗೆ ವರ್ಗಾವರ್ಗಿ ಮಾಡುವುದಕ್ಕೆ ಶಕ್ತಿನೇ ಬರದೇ ಹೋಯಿತು. ಒಬ್ಬ ಸಣ್ಣ ತಹಶೀಲ್ದಾರರನ್ನು ಹಾಕಿಸಿಕೊಡಲು ಆಗಲಿಲ್ಲ ಇವರೆಂತಹ ಶಾಸಕರು ಎಂದು ಹೇಳುತ್ತಾರೆ. ಈ ತರಹ ಅನೇಕ ರೋಗಗಳು ಇವೆ. ನಾನೇನು ತಮಗೆ ಹೇಳುತ್ತೇನೆಂದರೆ ಇದು ಶಾಸಕರಿಗೆ ನೀವು ಅವಕಾಶ ಕೊಟ್ಟಿರುವುದರಿಂದ ಯಾವುದಾದರೂ ಶಾಸಕರ ಹತ್ತಿರ ಬಂದೇ ಬರುತ್ತಾರೆ. ಇಲ್ಲ ನೀವೇ ಒಂದು ಹೊಸ ಸೂತ್ರವನ್ನು ಅಳವಡಿಸಿ. ಯಾವುದೋ ಒಂದು ಸೂತ್ರ ಅಳವಡಿಸಿ. ಹಿಂದೆ ತಮಗೆ ಗೊತ್ತಿರಬೇಕು. ಮಾನ್ಯ ಗುಂಡೂರಾವ್ ಅವರ ಕಾಲದಲ್ಲಿ ಮೂರು ವರ್ಷದ ಒಳಗೆ ಯಾವ ಕಾರಣಕ್ಕೂ ಯಾವ ಸಂದರ್ಭದಲ್ಲೂ ವರ್ಗಾವರ್ಗಿ ಆಗಕೂಡದು ಎಂದು ಮಾಡಿದ್ದರು. ಇಡೀ ವರ್ಷವೆಲ್ಲಾ ವರ್ಗಾವರ್ಗಿ ನಡೆಯುತ್ತಿದ್ದರೆ ಅದೂ ಒಳ್ಳೆಯದಲ್ಲ. ತಾವೇನು ಹೇಳುತ್ತೀರಿ? ಮೇ ಒಂದು ತಿಂಗಳು ಕಾಲಾವಧಿ ಕೊಟ್ಟಿದ್ದೀರಿ. ಆ ಒಂದು ತಿಂಗಳಲ್ಲೇ ವರ್ಗಾವರ್ಗಿಯ ಒಂದು ಜಾತ್ರೆ ಆಗುತ್ತದೆ. ಮತ್ತೆ ಇನ್ನು ಒಂದೂವರೆ ವರ್ಷದಲ್ಲಿ ಚುನಾವಣೆ ಬರುತ್ತದೆ. ನಾವ್ಯಾರು ಏನೇ ಹೇಳಿದರೂ ಸಹ ಅಧಿಕಾರಿಗಳು ನಮ್ಮ ಹಿಂದೆ ಬಂದೇ ಬರುತ್ತಾರೆ. ಅದರಲ್ಲಿ ಏನೂ ಅನುಮಾನ ಇಲ್ಲ. ಅದಕ್ಕೆ ಕಾರಣವೇನು? ಸರ್ಕಾರವೇ ಇದಕ್ಕೆ ಏನಾದರೂ ಒಂದು ಹೊಸ ಸೂತ್ರವನ್ನು ಕಂಡು ಹಿಡಿದರೆ ಸಾಧ್ಯ ಎನ್ನತಕ್ಕದ್ದು ಎಂಬುದನ್ನು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಈ) ಹಿರೇಕೆರೂರಿನಿಂದ - ತುರುವೇಕೆರೆಗೆ ಬಸ್‌ಗಳು ಸರಿಯಾಗಿ ಓಡಾಡುತ್ತಿಲ್ಲವಾದ್ದರಿಂದ ಸಾರ್ವಜನಿಕರಿಗೆ ತೊಂದರೆ.

ಶ್ರೀ ಯು. ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೇ, ಕಳೆದ 24ರಂದು ವಿಧಾನಸಭಾ ಅಧಿವೇಶನವನ್ನು ಮುಗಿಸಿ ಗ್ರಾಮಕ್ಕೆ ಹೋದಾಗ ನಿಟ್ಟೂರು ಹಾಗೂ